# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನ ಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ–583 105

**ಕುಲಸಚಿವರು** **ದೂರವಾಣಿ: 08392–242873/ಫ್ಯಾಕ್ಸ್: 08392– 242097**


ಸಂಖ್ಯೆ: ವಿಶ್ರೀಕೃವಿಬ/ಆಡಳಿತ/2017–18/40. ದಿನಾಂಕ: 22.04.2017

**ಸುತ್ತೋಲೆ:**

**ವಿಷಯ** : ಕರ್ನಾಟಕ ರಾಜ್ಯ ಉಚ್ಚನ್ಯಾಯಾಲಯದ ಧಾರವಾಡ ಪೀಠದ ಮಧ್ಯಂತರ ಆದೇಶಜಾರಿಗೊಳಿಸುವ ಕುರಿತು.

**ಉಲ್ಲೇಖ** :
1. ರಿಟ್ ಪಿಟಿಷನ್ ಸಂಖ್ಯೆ: 103446, 103445, 103447 ಆಫ್ 2017,
2. ವಿಶ್ರೀಕೃವಿಬ/ಆಡಳಿತ/2016–17/25, ದಿನಾಂಕ: 15.04.2017
3. ವಿದ್ಯಾರ್ಥಿಗಳ ಮನವಿ ಪತ್ರ: ದಿನಾಂಕ: 05.04.2017
4. ವಿದ್ಯಾರ್ಥಿಗಳ ಮನವಿ ಪತ್ರ: ದಿನಾಂಕ: 22.04.2017
5. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 22.04.2017

* * *

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ, ಈ ಮೂಲಕ ತಮ್ಮ ಅವಗಾಹನೆಗೆ ತರಬಯಸುವುದೇನೆಂದರೆ, 2015–16 ಹಾಗೂ 2016–17ನೇ ಶೈಕ್ಷಣಿಕ ಸಾಲಿನ ಕೆಲವು ಅನ್ಯ ರಾಜ್ಯ ಹಾಗೂ ರಾಜ್ಯದ ಅನ್ಯ ಪರೀಕ್ಷಾಮಂಡಳಿಗಳ ವಿದ್ಯಾರ್ಥಿಗಳ ಪ್ರವೇಶ ಅನುಮೋದನೆಯನ್ನು ರದ್ದುಗೊಳಿಸಲಾಗಿತ್ತು. ಈ ಪೈಕಿ ಕೆಲವು ವಿದ್ಯಾರ್ಥಿಗಳು ಸದರಿ ತೀರ್ಮಾನವನ್ನು ಪ್ರಶ್ನಿಸಿ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ಧಾರವಾಡ ಪೀಠದ ಮೊರೆಹೋಗಿದ್ದು, ಅದರಲ್ಲಿ ಉಲ್ಲೇಖ 01, ಪ್ರಕಾರ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ಧಾರವಾಡ ಪೀಠವು ಸದರಿ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿ ತುಂಬಲು ಅನುಮತಿ ನೀಡಿ ಮಧ್ಯಂತರ ಆದೇಶ ನೀಡಿದ ಹಿನ್ನೆಲೆಯಲ್ಲಿ ಉಲ್ಲೇಖ–4ರ ಪ್ರಕಾರ ಅಂತಹ ವಿದ್ಯಾರ್ಥಿಗಳಿಗೆ ದಿನಾಂಕ 24.04.2017ರವರೆಗೆ ಪರೀಕ್ಷಾ ಅರ್ಜಿ ತುಂಬಲು ಅನುಮತಿಸಲಾಗಿತ್ತು, ತದನಂತರ ಕೆಲ ವಿದ್ಯಾರ್ಥಿಗಳು ತಮಗೂ ಅವಕಾಶ ನೀಡಬೇಕೆಂದು ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಉಲ್ಲೇಖ–5 ರ ವಿದ್ಯಾವಿಷಯಕ್ ಪರಿಷತ್ ಸಭೆಯ ತೀರ್ಮಾನ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ತಡೆ ಹಿಡಿಯಲಾದ 04 ವಿದ್ಯಾರ್ಥಿಗಳಿಗೆ ಪರೀಕ್ಷಾ ಅರ್ಜಿ ತುಂಬಲು ದಿನಾಂಕ: 24.04.2017 ರವರೆಗೆ ಅನುಮತಿಸಲಾಗಿದೆ. ಇದೇ ರೀತಿಯಲ್ಲಿರುವ ಕೋರ್ಟ್‌ಗೆ ಹೋಗದೇ ಇರುವ ಇತರೆ ವಿದ್ಯಾರ್ಥಿಗಳಿಗೂ ಪರೀಕ್ಷಾ ಶುಲ್ಕವನ್ನು ತುಂಬಲು ಅನುಮತಿಸಲಾಗಿದೆ. ಈ ಎಲ್ಲಾ ವಿದ್ಯಾರ್ಥಿಗಳ ಪಲಿತಾಂಶವು ನ್ಯಾಯಲಯದ ಅಂತಿಮ ತೀರ್ಪಿಗೆ ಒಳಪಟ್ಟಿದ್ದು ಕೋರ್ಟಿನ ಆದೇಶವನ್ನು ಪಾಲಿಸಲಾಗುವುದು.

**ಕುಲಸಚಿವರು**
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ.
22/4/2017

**ಪ್ರತಿಗಳನ್ನು:**

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
2. ಕುಲಸಚಿವರು(ಮೌಲ್ಯಮಾಪನ), ವಿದ್ಯಾರ್ಥಿಗಳ ಪ್ರಶ್ನೆಪತ್ರಿಕೆ ಹೆಚ್ಚಿಗೆ ಮುದ್ರಿಸಲು ಸೂಕ್ತ ಕ್ರಮಕ್ಕಾಗಿ.
3. ಮೇ. ಲಾಜಿಸಿಸ್ ಲಿಮಿಟೆಡ್, ಬೆಂಗಳೂರು – ತಡೆ ಹಿಡಿದ ವಿದ್ಯಾರ್ಥಿಗಳ ನೊಂದಾಣಿ ಸಂಖ್ಯೆಗಳನ್ನು ತೆರವುಗೊಳಿಸಿ ಪರೀಕ್ಷಾ ಅರ್ಜಿ ತುಂಬಲು ವ್ಯವಸ್ಥೆ ಮಾಡಲು ಸೂಚಿಸಿದೆ.
4. ಎಲ್ಲಾ ಸಂಯೋಜಿತ ಸ್ನಾತಕ ಮಹಾವಿದ್ಯಾಲಯಗಳ ಪ್ರಾಚಾರ್ಯರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ,
5. ಕಛೇರಿ ಪ್ರತಿ.